# ವಚನಕಾರ್ತಿಯರ ವಚನಗಳಲ್ಲಿ ದೇಹ ಮೀಮಾಂಸೆ

ಮಹಾಲಿಂಗಪ್ರಭು

ಕನ್ನಡ ಸಹಾಯಕ ಅಧ್ಯಾಪಕರು, ದಯಾನಂದ ಸಾಗರ್ ಬಿಸಿನೆಸ್ ಅಕಾಡೆಮಿ, ಉದಯಪುರ, ಬೆಂಗಳೂರು.

DOI: https://doi.org/10.5281/zenodo.18816741

**ABSTRACT:**

ಕಾಯ, ಕಾಯಕಗಳ ನಡುವೆ ಅನೂಹ್ಯವಾದ ಸಂಬಂಧ ಸ್ಥಾಪಿತವಾಗಿರುತ್ತದೆ. ಇವುಗಳೇ ಎಲ್ಲಾ ಕಲ್ಪನೆ, ಕ್ರಿಯೆ, ಅನುಭೂತಿಗಳಿಗೂ ಮೂಲ. ಹಾಗಾಗಿ ಬೌದ್ಧ, ಜೈನ, ಹಿಂದೂ ಧರ್ಮಗಳು ದೇಹ ಅಥವಾ ಕರ್ಮ ಕುರಿತು ಏನನ್ನು ಹೇಳುತ್ತದೆ ಎಂದು ವಚನಗಳ ಅಧ್ಯಯನಕ್ಕೆ ಪೂರಕವಾಗಿ ಗಮನಿಸಲಾಗಿದೆ.

ದೇಹ ಮೀಮಾಂಸೆ ಎಂಬುದು ಬದುಕಿನ ಮೀಮಾಂಸೆಯೇ ಆಗಿದೆ. ದೇಹ ಆತ್ಮಗಳು ಬೇರೆ ಅಲ್ಲ ಎನ್ನುವುದು 205 ವಚನಕಾರರ ನಿಲುವಿನಲ್ಲಿ ಪ್ರಮುಖವಾದುದು. ಜನ್ಮಾಂತರಗಳನ್ನು ನಿರಾಕರಿಸುತ್ತಾರೆ. ಸುಳ್ಳು, ಅಪ್ರಾಮಾಣಿಕ, ಶಿವಭಕ್ತ ಅಲ್ಲದವನು ನಾಯಿ ಗರ್ಭಕ್ಕೆ ಹೊಗುತ್ತಾನೆ, ನಾಯಿ ಜನ್ಮ ಎಂಬ ಮಾತು ಕಂಡರು ಇವರು ಜನ್ಮಾಂತರಗಳ ಬಗ್ಗೆ ನಿರ್ಲಿಪ್ತರೆ. ಆತ್ಮ ಮಾತ್ರ ಮುಖ್ಯ ದೇಹವಲ್ಲ ಎಂಬ ನಿಲುವು ವಚನಕಾರ/ಕಾರ್ತಿಯರದಲ್ಲ. ದೇಹದಾನುಭವವೇ ಬಹಳ ಮುಖ್ಯವಾದುದು. ಕಾಯವಿಲ್ಲದೆ ನಾನು ಹೇಗೆ ಚನ್ನಮಲ್ಲಿಕಾರ್ಜುನನ್ನು ಕೂಡಲಿ ಎಂಬ ಅಕ್ಕನ ಮಾತು, (ಕೂಡಿ ಒಪ್ಪಚ್ಚೆಯಾಗಬೇಕು, ಭಕ್ತಿಯ ಮಾಡಿದಡೆ ಮತ್ತೊಂದು ಜನ್ಮ ದೊರೆವುದೆ ಎಂಬ ಪ್ರಶ್ನೆಯ ಮಾತು, ಇಂದ್ರಿಯ ಬಿಟ್ಟು ಕಾಯವಿರದು, ಕಾಯವ ಬಿಟ್ಟು ಇಂದ್ರಿಯವಿರದು ಎಂತು ನಿಃಕಾಮಿ ಎಂಬೆ, ಎಂತು ನಿರ್ದೋಷಿ ಎಂಬೆ) ಭಕ್ತಿ ಎಂದರೆ ಕಣ್ಣ ಕಂಬನಿಯಾಗಿ, ಗಂಟಲು ಗದ್ಗದವಾಗಿ ಬದಲಾಗುವ ದೇಹದ ಸ್ಥಿತಿಗಳ ಬಗ್ಗೆ ಹೇಳುವ ಸ್ವರೂಪದ ವಚನ, ಶರಣಸತಿ/ಲಿಂಗಪತಿ ಎಂಬ ಕಲ್ಪನೆ ದೇಹದ ಮೂಲಕ ವ್ಯಕ್ತಿಗೆ ದೊರೆಯುವ ಆಧ್ಯಾತ್ಮಿಕ ಅನುಭವವನ್ನೇ ಹೇಳುವಂಥದ್ದು ಎನಿಸುತ್ತದೆ. ವಚನಕಾರ/ ವಚನ ಕಾರ್ತಿಯರು.

**KEYWORDS:**

ನಿಃಕಾಮಿ, ಲೋಭಿ, ಜನ, ಮಠ, ಪರ್ವತ, ನಿರ್ಜನ, ಧ್ಯಾನ, ಮೌನ, ಜಪ, ತಪ, ಶೈವರ, ಅಘೋರಿಗಳ, ಶುದ್ಧತೆ, ನಿರ್ಲಿಪ್ತರೆ.

1. ಬದುಕಿನ ಸವಾಲುಗಳೊಂದಿಗೆ ಹೇಗೆ ಮುಖಾಮುಖಿಯಾಗುತ್ತಾರೆ. 2. ದೇಹ ಮನಸ್ಸುಗಳ ತಾಕಲಾಟಗಳ ಹೇಗೆ ಎದುರಿಸುತ್ತಾರೆ. 3. ದೇಹ ಹಸಿವಿನ ಕಲ್ಪನೆಯೊಂದಿಗೆ ಇರುವಂಥದ್ದು. ಬೇಕೋ ಬೇಡವೋ ಹಸಿವಿನ ಕಲ್ಪನೆ ಪ್ರಕೃತಿಧರ್ಮ ಹೊಟ್ಟೆಯ ಹಸಿವು, ದೇಹದ ಹಸಿವು, ಮನದ ಅನಿಯಮಿತ ಬಯಕೆಗಳ ಹಸಿವು. ಇವುಗಳ ತೃಪ್ತಿ, ನಿಯಂತ್ರಣ, ಕಂಡುಕೊಂಡರು ಎಂಬುದು ವಚನಗಳಲ್ಲಿ ಕಾಣುತ್ತೇವೆ. ಅವುಗಳಿಂದ ಮುಕ್ತವಾಗುವಿಕೆ ಹೇಗೆ 4. ದೇಹದ ಅಂಗಾಂಗಗಳಾದ ಕೈ, ಕಾಲು, ಶಿರ, ಎದೆ ಹಿನ್ನೆಲೆಯಲ್ಲಿ. 5. ವ್ಯಕ್ತಿಯ ಮಾನಸಿಕ ಹಿನ್ನೆಲೆಯಾದ ಅಂಗ, ಸಂಗ, ಲಿಂಗ, ಶೀಲ ಹಿನ್ನೆಲೆಯಲ್ಲಿ ದೇಹ ಮೀಮಾಂಸೆಯನ್ನು ವಿವರಿಸಿಕೊಳ್ಳಲು ಪ್ರಯತ್ನಿಸಲಾಗಿದೆ. 6. ಚಿತ್ತ ಕುರಿತ ಚಿಂತನೆಗಳನ್ನು ಗಮನಿಸಲಾಗಿದೆ. ಬುದ್ಧಿ ಬಗ್ಗೆ ವಚನಕಾರ್ತಿಯರು ಮೌನವಾಗಿರುವುದರಿಂದ ಚಿತ್ತದ ಭಾಗವಾಗಿ ಸಾವು, ಮರಣ ಚರ್ಚೆಯಾಗಿರುವುದರಿಂದ ಅವುಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. 7. ಮೊದಲಿಗೆ ವಚನಗಳ ನಿಕಟ ಓದನ್ನು ಗಮನಿಸಲಾಗಿದೆ. 8. ಕೆಲವು ವ್ಯತ್ಯಾಸ ಗುರುತಿಸಿಕೊಳ್ಳಲು ಬಸವಣ್ಣನ ಹಾಗು ಅಲ್ಲಮನ ಪ್ರಮುಖ ವಚನಗಳನ್ನು ತೆಗೆದುಕೊಳ್ಳಲಾಗಿದೆ. ವಚನಗಳ ಯುಗದ ಪ್ರವರ್ತಕರಾದ ಎಲ್ಲ ಚಲನೆಗಳ ಮೂಲ ಬಿಂದುಗಳೇ ಆಗಿರುವುದರಿಂದ ಪ್ರಮುಖ ವಚನಗಳನ್ನು ಆರಿಸಿಕೊಳ್ಳಲಾಗಿದೆ.

ವಚನಕಾರ್ತಿಯರಲ್ಲಿ ದೇಹ ಕಲ್ಪನೆ ದೇಹ ಎಂಬ ರೂಪಕವನ್ನು ಅಕ್ಕ 10 ವಚನಗಳಲ್ಲಿ ಬಳಸುತ್ತಾಳೆ. 4 ವಚನಗಳು ಮಾತ್ರ ಸಾಹಿತ್ಯಕವಾಗಿದ್ದು ಉಳಿದದ್ದು ತತ್ವ, ಸಿದ್ಧಾಂತ ಚಿಂತನೆಗೆ ಸೇರಿರುವುದರಿಂದ ಅದನ್ನು ಇಲ್ಲಿ ಪರಿಗಣಿಸಿಲ್ಲ. ದೇಹದ ಭ್ರಮೆ ಅಗಾಧವಾದುದು. ದೇಹಕ್ಕೆ ಲಜ್ಜೆ, ಅಹಂಕಾರ, ಮನಸ್ಸು, ಅಭಿಮಾನ, ಸಂಸಾರ, ಲೋಕ ಜಂಜಾಟ ಬಿಡದು. ಆದರೆ ಶರಣನಾದವಂಗೆ ಮಾತ್ರ ಭವದ, ದೇಹದ ಜಂಜಾಟಗಳಿರುವುದಿಲ್ಲ. (ಹಾಗಾಗಿ ತನಗೆ) ದೇಹದ ಭಾವ ಕಳೆದುಕೊಂಡ, ಲಜ್ಜೆಯ ಭಾವ ಕಳೆದುಕೊಂಡವಳಿಗೆ ಸಮಾಜ ಏನೆಂದು ಹೆದರಿಸಬಲ್ಲದು. ಜೈವಿಕ ಲಿಂಗದ ಕಲ್ಪನೆಯ ಹಿನ್ನೆಲೆಯಲ್ಲಿ, (ಯೋನಿಯ ಕಲ್ಪನೆಯಲ್ಲಿ) ಬಟ್ಟೆಯ ಹಿನ್ನೆಲೆಯಲ್ಲಿ ಹೆದರಿಸಲು, ನಿಯಂತ್ರಿಸಲು ಸಾಧ್ಯವೇ ಎಂದು ಪ್ರಶ್ನಿಸುತ್ತಾಳೆ. ದೇಹ ಅಥವಾ ಪ್ರಾಣ ಎಂಬುದು ಬಯಲು ಎಂದು ಅರಿತವಳಿಗೆ ಅಸಾಧ್ಯವಾದುದು. ಭಕ್ತನ ರೋಮವೊಂದು ನೊಂದರು ಶಿವನು ನೊಂದುಕೊಳ್ಳುವ, ತಾಯಿ ನೊಂದರೆ ಒಡಲ ಶಿಶು ನೊಂದಂತೆ ಭಕ್ತನ ನೋವಿಗೆ ದೈವವು ನೋಯುವುದು ಹಾಗಾಗಿ ದೇಹದ ಬಗ್ಗೆ ಅಪಾರ ಗೌರವ ಹೊಂದಿದ ಭಾವ ಕಾಣಬಹುದು. ಇಲ್ಲಿಯೇ ಅಲ್ಲಮ ಹಾಗು ಬಸವಣ್ಣನ ವಚನಗಳನ್ನು ಪೂರಕವಾಗಿರುವುದರಿಂದ ಬಳಸುತ್ತಿರುವೆ.

**"ಅರಿತು ಜನ್ಮವಾದವರಿಲ್ಲ, ದುರಭಿಮಾನವ ಹೊತ್ತು ಅಘಟಿತ ಘಟಿತವ ನುಡಿವಿರಿ.**
**ಸತ್ತು ಮರಳಿ ತೋರುವರಿಲ್ಲ,**
**ಈ ದೇಹವಿಡಿದು ನುಡಿವ ಪ್ರಪಂಚಗಳನೇನೆಂಬೆ ಗುಹೇಶ್ವರಾ."**

**ಅಲ್ಲಮ (822 ವಚನ ಸಂಖ್ಯೆ, ವಚನ ಸಂಪುಟ-2)**

ದೇಹವ ನಂಬಿ ಆಡುವ ಮಾತುಗಳು ವ್ಯರ್ಥ. ಹೋದವರು ಬಂದು ಏನನ್ನು ಯಾರು ಹೇಳಿದವರು ಇಲ್ಲ. ಯಾರಿಗೂ ಇಂಥದ್ದೇ ಜೀವನ ಬೇಕು ಅಂದುಕೊಂಡು ಹುಟ್ಟಲು ಸಾಧ್ಯವಿಲ್ಲದ್ದು. ದುರಭಿಮಾನದಲಿ ಆಡಬಾರದ ಮಾತುಗಳನ್ನು ಆಡುವ ಇಂಥ ಜನರಿಗೆ ಏನೆಂದು ಹೇಳಲಿ ಎನ್ನುತ್ತಾನೆ.

ಬಹುಶಃ ಪರಂಪರೆಯ ಜನ್ಮಾಂತರಗಳ ಕಲ್ಪನೆಯ ಲೇವಡಿ ಮಾಡಿರಬಹುದೆ?

**ಉಳ್ಳವರು ಶಿವಾಲಯವ ಮಾಡುವರು**
**ನಾನೇನು ಮಾಡಲಯ್ಯ ಬಡವನಯ್ಯ**
**ಎನ್ನ ಕಾಲೇ ಕಂಬ ದೇಹವೇ ದೇಗುಲ**
**ಶಿರವೆ ಹೊನ್ನ ಕಳಶವಯ್ಯ.**
**ಕೂಡಲಸಂಗಮ ದೇವ ಕೇಳಯ್ಯ,**
**ಸ್ಥಾವರಕ್ಕಳಿವುಂಟು ಜಂಗಮಕ್ಕೆ ಅಳಿವಿಲ್ಲ.**

**ಸಮಗ್ರ ವಚನ ಸಂಪುಟ 2; ಬಸವಣ್ಣ:- ಪುಟ : 821**

ಈ ವಚನ ಪರಂಪರೆಯಲ್ಲಿನ ದೇಹ ಕುರಿತ ಎಲ್ಲ ಆಕ್ಷೇಪಣೆಗಳಿಗೂ ತಿರುಗೇಟು ನೀಡಿದಂಥ ಮೈಲಿಗಲ್ಲಾಗಬಹುದಾದ ತೂಕವಿರುವ ವಚನ. ಬಹುಶಃ ದೇಹವನ್ನು ಇದಕ್ಕಿಂತ ಉನ್ನತವಾಗಿ ಗೌರವಿಸಿದವರು ಮತ್ತೊಬ್ಬರು ಸಿಗಲಾರರು ಎಂದೇ ಹೇಳಬಯಸುವೆ. ದೇಹವನ್ನು ದೇವಾಲಯ ಮಾಡುವ ಕಲ್ಪನೆ ಪರಂಪರೆಯನ್ನೇ ಬಡಿದೆಬ್ಬಿಸಿದ ಮಾತು. ಬಹುಶಃ ಅಲ್ಲಿಯವರೆಗೂ ವೈದಿಕ ಪರಂಪರೆ ದೇಹವನ್ನು ನಿಕೃಷ್ಟವನ್ನಾಗಿ ಆತ್ಮದ ಸಾಧನೆಗೆ ದೇಹ, ಅದರ ಭಾವಗಳು ಅಡ್ಡಿಯೆಂದು ಅದನ್ನು ನಿಯಂತ್ರಿಸದೆ ಆತ್ಮೋದ್ಧಾರವೇ ಇಲ್ಲ ಅಭಿಪ್ರಾಯವನ್ನು ಬೆಳೆಸಿತ್ತು. ಆದರೆ ಆ ಚಿಂತನೆಯನ್ನೇ ಬುಡಮೇಲು ಮಾಡಿ ದೇಹವೆಂಬುದು ಭಗವಂತನ ನಿಲಯ. ಮನೆಯೊಳಗೆ ದೈವವಾಸಿಸುವ ಸ್ಥಳ ಎನ್ನುತ್ತ, ಲೋಭಿ, ಸ್ವಾರ್ಥಿಜನರನ್ನು ಕಂಡಾಗ ಬಹುಶಃ ಮನೆಯೊಡೆಯನಿದ್ದಾನೋ ಇಲ್ಲವೋ ಹೊಸ್ತಿಲಲ್ಲಿ ಹುಲ್ಲುಹುಟ್ಟಿ, ಮನೆಯೊಳಗೆ ರಜ ತುಂಬಿ ಎಂಬ ವಚನವನ್ನು ಬಸವಣ್ಣ ಬರೆಯುತ್ತಾರೆ. ದೈವ ಈ ದೇಹದ ಯಜಮಾನ ಯಾರಲ್ಲಿ ಈ ದೈವ ಎಂಬ ಯಜಮಾನ ಇರುವುದಿಲ್ಲವೋ ಅವನು ಯೋಗ್ಯನಾಗಿರಲು ಹೇಗೆ ಸಾಧ್ಯ ಎಂಬ ಕಲ್ಪನೆಯನ್ನು ಕೊಡುತ್ತಾನೆ. ದೇಹ ಎಂಬುದು ಭಗವಂತನ ಮನೆ ಎಂದು ನೋಡುವುದಲ್ಲದೆ ಮನೆಗೂ ದೇಹಕ್ಕೂ ಸಾಮ್ಯತೆಯನ್ನು ಕಲ್ಪಿಸುತ್ತಾನೆ. ಅಕ್ಕನಲ್ಲೂ ಇಂಥದ್ದೇ ಒಂದು ಪೂರಕ ದೃಷ್ಟಿ ಹರಿದು ಕೊಂಚದರಲ್ಲಿ ತನ್ನ ಸ್ವರೂಪವನ್ನು ವಿಸ್ತರಿಸಿಕೊಳ್ಳುತ್ತದೆ. ಅಂದರೆ ಅಕ್ಕಮಹಾದೇವಿ ಒಂದು ಹೆಜ್ಜೆ ಭಿನ್ನವಾಗಿ ಇಲ್ಲಿ ಇಡುತ್ತಾಳೆ. ದೇಹವೆಂಬುದು ಬಹಳ ಚಂಚಲ ಸ್ಥಿತಿಯದ್ದೇ ಆದರೆ ಯಾರು ಶರಣರೋ ಅವರಿಗೆ ದೇಹದ ಬಯಕೆಗಳ ಬಾಧೆ ಇರುವುದಿಲ್ಲ ಎನ್ನುವುದರೊಂದಿಗೆ, ಭಕ್ತನ ದೇಹವೇ ಶಿವನ ನೆಲೆ. ಭಕ್ತ ನೊಂದಡೆ ಶಿವನು ನೋಯುವನು. ಕೇವಲ ದೇಹಾಭಿಮಾನದಲ್ಲಿ ಶರಣ ಅಥವಾ ಭಕ್ತನ ನೋಯಿಸದಿರಿ ಎನ್ನುತ್ತಾಳೆ.

**ಅಮೇಧ್ಯದ ಮಡಿಕೆ, ಮೂತ್ರದ ಕುಡಿಕೆ,**
**ಎಲುಬಿನ ತಡಿಕೆ, ಕೀವಿನ ಹಡಿಕೆ, ಸುಡಲೀ ದೇಹವ;**
**ಒಡಲುವಿಡಿದು ಕೆಡದಿರು, ಚನ್ನಮಲ್ಲಿಕಾರ್ಜುನನರಿಯದ ಮರುಳೆ**
**ಸಮಗ್ರ ವಚನ ಸಂಪುಟ 5 : ವಚನ 2**

ದೇಹ ಇದ್ದಾಗ ಲಜ್ಜೆಯ ಭಾವ, ಮನದ ಕಲ್ಪನೆ ಇದ್ದಾಗ ಅಭಿಮಾನ, ನೆನಪು, ಸಂಸಾರದ ಭಾವ, ಭವವು ಕುಣಿಕೆಯಾಗಿ ಬೆನ್ನೇರುತ್ತದೆ ವಿಧಿವಶವೇ ಆಗಿಬಿಡುತ್ತದೆ. ಆದರೆ ಮಲ್ಲಿಕಾರ್ಜುನ ಒಲಿದ ಶರಣನಿಗೆ ಈ ಬಂಧನಗಳಿರುವುದಿಲ್ಲ. ಏಕೆಂದರೆ ಅವರಿಗೆ ದೇಹ, ಮನ, ಅಭಿಮಾನಗಳೆಂಬುದು ಇರುವುದಿಲ್ಲ. ದೇಹವನ್ನು ಮಡಿಕೆಗೂ ಅದು ಎಲುಬು, ಮಾಂಸ, ಕೀವುಗಳ ಗೂಡು ಎಂದು ವಿವರಿಸುತ್ತ ಇದಕ್ಕೆ ಪರವಶವಾಗಿ ಮಲ್ಲಿಕಾರ್ಜುನನ್ನು ಮರೆಯದಿರು. ಅದರೊಳಗಿನ ಜೀವ ತತ್ವವನ್ನು ಚೈತನ್ಯವನ್ನು ಕಾಣು ಎನ್ನುತ್ತಾಳೆ.

**ಶಿವಭಕ್ತರು ನೊಂದಡೆ, ಶಿವನು ನೋವ ನೋಡಾ.**
**ಶಿವಭಕ್ತರು ಪರಿಣಾಮಿಸಿದೆಡೆ, ಶಿವನು ಪರಿಣಾಮಿಸುವ ನೋಡಾ.**
**ಭಕ್ತದೇಹಿಕದೇವನೆಂದು ಶ್ರುತಿ ಹೊಗಳುವ ಕಾರಣ,**
**ಶಿವಭಕ್ತರ ಲೇಸು ಹೊಲ್ಲೆಹ ಶಿವನ ಮುಟ್ಟುವುದು ನೋಡಾ. ತಾಯಿ ನೊಂದಡೆ**
**ಒಡಲ ಶಿಶು ನೋವ ತೆರನಂತೆ, ಭಕ್ತರು ನೊಂದಡೆ ತಾ ನೋವ ನೋಡಾ ಚೆನ್ನಮಲ್ಲಿಕಾರ್ಜುನ.**
**ಸಮಗ್ರ ವಚನ ಸಂಪುಟ 5 : ವಚನ 377**

ತಾಯಿ ನೊಂದೊಡೆ ಒಡಲ ಶಿಶು ನೊಂದ ಹಾಗೆ ಎನ್ನುತ್ತ ಶಿವನು ಭಕ್ತ ನೊಂದಡೆ ನೋಯುವನು ಎನ್ನುತ್ತಾಳೆ. ದೈವ ಎಂಬುದು ಭಕ್ತನಂತರಾತ್ಮದಲ್ಲಿ ಅಡಗಿರುವನು. ಭಕ್ತನ ದೇಹವೇ ಭಗವಂತನಿರುವ ಸ್ಥಳ ಎನ್ನುತ್ತಾಳೆ.

ಮುಕ್ತಾಯಕ್ಕನ ವಚನದಲ್ಲಿ ಒಡಲು ಕಲ್ಪನೆ:

**ನುಡಿಯ ಹಂಗಿನ್ನು ನಿಮಗೆ ಹಿಂಗದು**
**ನಡೆಯನೆಂತು ಪರರಿಗೆ ಹೇಳುವಿರಿ?**
**ಒಡಲ ಹಂಗಿನ ಸುಳುಹು ಬಿಡದು**
**ಎನ್ನೊಡನೆ ಮತ್ತೇತರ ಅನುಭವವಣ್ಣಾ**
**ತಾನಾದಲ್ಲದೆ ಇದಿರಿಂಗೆ ಹೇಳಬಹುದೇ?'**
**ಅರಿವ ತೋರಬಲ್ಲಡೆ ತನ್ನನರುಹದೆ ಅರಿವನು ಕಾಣಾ ಎನ್ನ ಅಜಗಣ್ಣ ತಂದೆ**
**ವಚನ ಸಂಪುಟ-5, ವಚನ ಸಂಖ್ಯೆ : 1123**

ಶರಣರು ಅನುಭಾವವನ್ನು ಸಮಾನ ಮನಸ್ಕರ ನಡುವೆ ನಡೆಯುವ ಸಂವಾದ ಎನ್ನುತ್ತಾರೆ. ಅನುಭಾವ ಎನ್ನುವುದು ತೀರ ಸ್ವಂತದ, ಮಾತಿನಲ್ಲಿ ಹೇಳಲಾಗದ ಸಂಗತಿ. ಮಾತಿನಲ್ಲಿ ಹೇಳಲು ಸಾಧ್ಯವಾದರೆ ಸುಳ್ಳು ಎಂದಾಗುತ್ತದೆ. ನುಡಿಗೆ, ಮಾತಿನ ಹಂಗಿಗೆ ಅನುಭವ ಒಳಗಾಗಲಾರದು. ಮೌನವನ್ನು ಒಳಗೊಂಡಿರುವ ಮಾತು ಪರತತ್ವವಾಗಬಲ್ಲದು. ಅನುಭವ ವ್ಯಕ್ತಪಡಿಸಲಾಗದಿರುವ ಮಾತು ಅದೆಂಥ ಪರತತ್ವ. ಅದನ್ನು ಅಷ್ಟೇ ಘನವಾಗಿ ಅಭಿವ್ಯಕ್ತಿಸಲಾಗುವಂಥದ್ದೇ ಮಾತು ಎನಿಸಿಕೊಳ್ಳುತ್ತದೆ. ಇಲ್ಲಿ ಎರಡು ಮುಖ್ಯ ವಾದಗಳಿವೆ. ಮಾತು ಎಂಬುದು ಅನುಭವ ವ್ಯಕ್ತಪಡಿಸಲು

ಸಾಧ್ಯವೋ? ಇದೆ ಎಂಬುದು ಅಲ್ಲಮನ ವಾದವಾದರೆ ಇಲ್ಲ ಎಂಬುದು ಮುಕ್ತಾಯಕ್ಕಳ ವಾದ. ಇದು ನುಡಿ ಪರಂಪರೆಯ ಚರ್ಚೆಯೂ ಹೌದು. ಒಡಲು ಇಲ್ಲಿ ಬಹು ಮುಖ್ಯ ಪಾತ್ರವನ್ನು ವಹಿಸುತ್ತಿದೆ. ಒಡಲಿನ ಹಂಗಿಗೆ ಒಳಗಾದವರು ನೀವು, ಒಡಲಿನ ಹಂಗಿಲ್ಲದವಳು ನಾನು ಹಾಗು ತಾನು ನಂಬಿದ ಪರಂಪರೆ ಎಂದು ಮುಕ್ತಾಯಕ್ಕ ಹೇಳುತ್ತಿದ್ದಾಳೆ. ಒಡಲು ಭಾಷೆಯ ಅನಂತ ಸಾಧ್ಯತೆಗಳನ್ನು ಚರ್ಚಿಸುವ ವಚನದಲ್ಲಿ ಕೊಂಡಿಯಾಗಿ ಬಂದಿದೆ.

ಅಮ್ಮುಗೆ ರಾಯಮ್ಮನ ವಚನಗಳಲ್ಲಿ, ಹಡಪದಪ್ಪಣ್ಣಗಳ ಪುಣ್ಯಸ್ತ್ರೀ ಲಿಂಗಮ್ಮನ 11 ವಚನಗಳಲ್ಲಿ ಹಾಗು ಸತ್ಯಕ್ಕನ 01 ವಚನದಲ್ಲಿ ದೇಹ ರೂಪಕ ಕುರಿತ ಹಾಗು ಪರಂಪರೆಯ ದೃಷ್ಟಿಕೋನ ಹಾದು ಹೋಗುತ್ತದೆ. ಆದರೆ ಶಿವನ ಅನುಗ್ರಹವಿರುವ ಶರಣನಿಗೆ ಬಾಧಿಸದು ಎನ್ನುವ ಅಂಶಗಳಿವೆ.

**ಎನ್ನ ದೇಹವ ದಗ್ಧವ ಮಾಡಯ್ಯ.**
**ಎನ್ನ ಕಾಯದಲಿಪ್ಪ ಕರ್ಮವ ತೊಡೆಯಯ್ಯ.**
**ಎನ್ನ ಭಾವದಲಿಪ್ಪ ಭ್ರಮೆಯ ಜರಿಯಯ್ಯ**
**ದೇಹವಿಲ್ಲದೆ ಸುಳಿಯ ಬಲ್ಲಡೆ ಲಿಂಗೈಕ್ಯನೆಂಬೆನು**
**ಭಾವವಿಲ್ಲದೆ ಭ್ರಮಿತನಾಗಬಲ್ಲೆಡೆ ನಿರ್ಲೇಪಿಯೆಂಬೆನು**

**ಸಮಗ್ರ ವಚನ ಸಂಪುಟ 5 : 650.**

ಮೇಲಿನ ವಚನ ದೇಹವ ದಗ್ಧವ ಮಾಡಯ್ಯ ಈ ಮಾತು ದೇಹದ ಕಲ್ಪನೆಯಲ್ಲಿರುವ ಮನುಜನ ಭ್ರಮೆ, ಕರ್ಮಗಳು ಅಗಣಿತವಾದುದು. ತಾನಂದುಕೊಂಡ ರೀತಿಯಲ್ಲಿ ಬಾಳು ಅಸಾಧ್ಯವಾದುದು. ತನ್ನ ನಂಬಿಕೆ, ನಿಷ್ಠೆಗಳನ್ನು ಕಾಡುವಂಥದ್ದು ಹಾಗಾಗಿ ಸುಡು, ಬೂದಿ ಮಾಡು ಎನ್ನುತ್ತಾಳೆ. ಜೀವದ ಚಲನೆ ಹಾದಿಯಲ್ಲಿನ ದೇಹದ ಕರ್ಮ ಹಾಗು ಅದರ ಭ್ರಮೆಗಳನ್ನು ಸುಡು ಎಂದು ಬೇಡುತ್ತಾಳೆ. ಎರಡನೆ ವಚನದಲ್ಲಿ ದೇಹದ ಭಾವವಿಲ್ಲದೆ, ದೈವಭಾವದ ಭ್ರಮೆಯಲ್ಲಿ ನಡೆದದ್ದಾದರೆ ದೈವವೆ ಕೈಗೆ ಸಿಲುಕದಂತೆ ಎನ್ನುತ್ತಾಳೆ. ಆದರೆ ಈ ಭಾವಗಳು ಅಮುಗೇಶ್ವರನರಿಯದೆ ಸಿಗಲಾರದು. ಹಡಪದಪ್ಪಣ್ಣಗಳ ಪುಣ್ಯಸ್ತ್ರೀ ಲಿಂಗಮ್ಮ ಎಲ್ಲಿಯೂ ಪರಂಪರೆಗೆ ಭಿನ್ನವಾಗಿ ಹೋಗಲಿಲ್ಲ. ಆದರೆ ದೇಹದ ಮೇಲೆ ಲಿಂಗ ನೆಲೆಯೂರಿ, ದೇಹವೇ ಬಯಲಾಗಿ, ಬೆಳಕಾಗಿ ಬದಲಾದವಳಿಗೆ ಈ ದೇಹದ ಸವಾಲುಗಳು ಬಾರವು ಎಂದಿದು ಎಂದು ಹೇಳುತ್ತಾಳೆ.

**ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯ,**
**ವಿಚಾರಿಸಿದೆಡೆ ಏನೂ ಹುರುಳಿಲ್ಲಯ್ಯ,**
**ಪ್ರಪಂಚಿನ ಡಂಭದಲ್ಲಿ ಎನ್ನನೊಂದು**
**ರೂಪು ಮಾಡಿ ನೀವಿರಿಸಿದಿರಿ ಕೂಡಲ ಸಂಗಮದೇವಾ**

**ಸಮಗ್ರ ವಚನ ಸಂಪುಟ 01, ವಚನ ಸಂಖ್ಯೆ 29**

ಅತ್ತಿ ಹಣ್ಣು ನೋಡಲು ಬಹು ಸುಂದರ ಆದರೆ ರುಚಿಯು ಇಲ್ಲದ್ದು ಮತ್ತು ಒಳಗೆಲ್ಲ ಹುಳು. ಇಂಥ ಹಣ್ಣಿನಂತೆ ಏನು ಬೆಲೆ ಇಲ್ಲದ ನನ್ನಂಥವನನ್ನು ಸೃಷ್ಟಿಸಿದೆ

ಎಂದು ತಮ್ಮ ಆತ್ಮಾವಲೋಕನ ಮಾಡಿಕೊಳ್ಳುವ ವಚನ.

**ಮಠವೇಕೋ ಪರ್ವತವೇಕೋ ಜನವೇಕೊ ನಿರ್ಜನವೇಕೋ**
**ಚಿತ್ತ ಸಮಾಧಾನವುಳ್ಳ ಶರಣಂಗೆ?**
**ಮತ್ತೆ ಹೊರಗಣ ಚಿಂತೆ ಧ್ಯಾನ ಮೌನ ಜಪ ತಪವೇಕೋ,**
**ತನ್ನ ತಾನರಿದ ಶರಣಂಗೆ ಗುಹೇಶ್ವರಾ?**

**ಸಮಗ್ರ ವಚನ ಸಂಪುಟ 2, ವಚನದ ಸಂಖ್ಯೆ 1434**

ಚಿತ್ತ ಎಂದರೆ ಮನಸ್ಸು. ಮನಸ್ಸು ಸಮಾಧಾನಿಯಾದ ಶರಣನಿಗೆ ಜನ, ಮಠ, ಪರ್ವತ, ನಿರ್ಜನ, ಧ್ಯಾನ, ಮೌನ, ಜಪ, ತಪ ಎಂಬ ಕಲ್ಪನೆಗಳು, ಸಾಧನೆಗಳು ಯಾವುದು ಅವಶ್ಯವಿರುವುದಿಲ್ಲ. ಸಂನ್ಯಾಸಿ ಸಂಸಾರಿ ಒಂದರ್ಥದಲ್ಲಿ ಎಲ್ಲ ಒಂದೇ ಲೌಕಿಕ ಜಗತ್ತು, ಆಧ್ಯಾತ್ಮಿಕ ಜಗತ್ತು ಎಲ್ಲವು ಅವನಿಗೆ ಒಂದೆ ಎಂದು ಅಲ್ಲಮ ಹೇಳುತ್ತಿದ್ದಾನೆ. ''ಚಿತ್ತಶುದ್ಧವಿಲ್ಲದವರಲ್ಲಿ ಮನ ಸಂಚಲ ನಿಲ್ಲದು ಮನಸಂಚಲ ನಿಲ್ಲದವರಲ್ಲಿ ಶಿವಧ್ಯಾನ 1 ಕರಿಗೊಳ್ಳದು'' ಚಿತ್ತ-ಮನಸ್ಸು ಶುದ್ಧವಿಲ್ಲದವರಲ್ಲಿ ಮನಸ್ಸಿನ ಚಂಚಲತೆ ನಿಲ್ಲದು, ಅಲ್ಲಿ ಶಿವಧ್ಯಾನವು ಸಾಧ್ಯವಾಗದು, ಅಂಥವನ ನುಡಿ ಸುಳ್ಳು, ಭ್ರಾಂತಿಯಲ್ಲಿ ನಡೆವ ಯೋಗಿ ಎಂದು ಕರೆಸಿಕೊಳ್ಳುವವರಿಗೆ ಮನಸ್ಸೇ ಬೇತಾಳನಂತೆ ಕಾಡುವುದು ಎಂದು ಹೇಳುತ್ತಾನೆ.

ಅಕ್ಕಮ್ಮನ ವಚನಗಳಲ್ಲಿ ಚಿತ್ತ ಕಲ್ಪನೆ:

**ಅಕ್ಕಿ ಬೇಳೆ ಬೆಲ್ಲ ಉಪ್ಪು ಮೆಣಸು**
**ಅಡಕೆ ಫಲ ರಸ ದ್ರವ್ಯ ಮುಂತಾದ ದ್ರವ್ಯಕ್ಕೆ ವ್ರತವೋ?**
**ಮುಟ್ಟುವ ತಟ್ಟುವ ಸೋಂಕುವ ಚಿತ್ತಕ್ಕೆ ವ್ರತವೋ?**

**ಸಮಗ್ರ ವಚನ ಸಂಪುಟ-5, ವಚನ ಸಂಖ್ಯೆ 436**

ವ್ರತ ಎಂಬುದು ಆಚರಣೆಯಲ್ಲ, ಬಳಸುವ ಪದಾರ್ಥಗಳಿಂದ ವ್ರತವಾಗುವುದಿಲ್ಲ. ಎಂಬುದಕ್ಕೆ ಅಡುಗೆಯ ವಸ್ತುಗಳನ್ನು ಇಲ್ಲಿ ಹೆಸರಿಸುತ್ತಾಳೆ. ಇವು ಬಾಹ್ಯದಲ್ಲಿ ಮಾಡುವ ಸೌಕರ್ಯವಲ್ಲದೆ ವ್ರತಕ್ಕೆ ಸಲ್ಲ. ಚಿತ್ತಕ್ಕೆ ನೀತಿನಿಯಮಗಳಿಲ್ಲ. ಶುದ್ಧವಾದುದು. ಸಮಾಜದ ಕಟ್ಟಲೆಗಳಿಲ್ಲ. ಸಂಸಾರದ ಬಂಧನವಿಲ್ಲ. ಮನುಜ ಜೀವನದ ಸೌಕರ್ಯಗಳಿಗೆ ಸೃಷ್ಟಿಯಾಗಿದೆಯೇ ಹೊರತು ಚಿತ್ತಕ್ಕೆ ಸಂಬಂಧಿಸುವಂಥದ್ದೇನೂ ಇಲ್ಲ.

**`ಕಾಮಿಗೆ ವ್ರತವುಂಟೆ, ನಿಃಕಾಮಿಗಲ್ಲದೆ?**
**ಕ್ರೋಧಿಗೆ ವ್ರತವುಂಟೆ ಸಮಾಧಾನಿಗಲ್ಲದೆ, ಲೋಭಿಗೆ ವ್ರತವುಂಟೆ,**
**ಉದಾರಿಗಲ್ಲದೆ ಇಂತೀ ಕ್ಷಮೆ ದಮೆ ಶಾಂತಿ**
**ಸಮಾಧಾನಸಂಪದ ಮುಂತಾಗಿ ಗುರುಲಿಂಗ ಜಂಗಮಕ್ಕೆ,**
**ತನುಮನಧನದಲ್ಲಿ ನಿರತನಾಗಿ, ತನ್ನ ತ್ರಾಣಕ್ಕೆ ಇದ್ದಂತೆ ಚಿತ್ತಶುದ್ಧಾತ್ಮನಾಗಿ**
**ಇಪ್ಪ ಮಹಾಭಕ್ತನೆ ಕೃತ್ಯವಿಲ್ಲದ ಶರಣ.'**

**ಸಮಗ್ರ ವಚನ ಸಂಪುಟ-5, ವಚನ 467**

ಆತನ ಪಾದ ಎನ್ನ ಹೃದಯದಲ್ಲಿ ಸಮಾಧಾನಿ, ನಿಃಕಾಮಿ, ಉದಾರಿಗಳಲ್ಲಿ ಮಾತ್ರ ಕ್ಷಮೆ, ದಯೆ, ಶಾಂತಿ ಗುಣಗಳಿರಲು ಸಾಧ್ಯ. ಆಚಾರವೆ ಪ್ರಾಣವಾದ ರಾಮೇಶ್ವರಲಿಂಗ ಇಂಥವನಿಗೆ ಮಾತ್ರ ದೊರೆಯುವುದು. ಕಾರಣವಿಲ್ಲದೆ ಬಾಳುವ ಭಕ್ತನ ಸಾಮಿಪ್ಯ ಎನ್ನ ಹೃದಯದಲ್ಲಿರುತ್ತದೆ. ಸಮಾಜದಲ್ಲಿ ವ್ಯಕ್ತಿಗೆ ಸಮಸ್ಯೆಗಳು ಅಧಿಕ. ತನುಮನಧನ ಗುರು, ಲಿಂಗ, ಜಂಗಮಕ್ಕೆ ಅರ್ಪಿಸಿ ಚಿತ್ತಶುದ್ಧಿಯಾದಂತ ಭಕ್ತರೊಂದಿಗೆ ನಾನಿರುತ್ತೇನೆ. ಎನ್ನುತ್ತಾಳೆ. ಚಿತ್ತಶುದ್ಧಿಗೆ ಆದ್ಯತೆ ನೀಡುತ್ತಾಳೆ. ಕೆಲಸ, ಕಾರ್ಯ, ಪೂಜೆ ಶುದ್ಧ ಮನಸ್ಸಿಲ್ಲದಿದ್ದರೆ ಪೂರ್ಣವಾಗುವುದಿಲ್ಲ. ಹಾಗು ಮನುಜನ ಲೌಕಿಕ ಬಡತನ ಹಾಗು ಮಾನಸಿಕ ಬಡತನಕ್ಕೆ ಕಾರಣವಾಗುತ್ತದೆ ಎನ್ನುತ್ತಾಳೆ.

**ಸತ್ಯಕ್ಕನ ವಚನ ಕೈ ಕುರಿತಂತೆ**
**ಲಂಚವಂಚನಕ್ಕೆ ಕೈಯಾನದ ಭಾಷೆ**
**ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ**
**ನಾನು ಕೈ ಮುಟ್ಟಿ ಎತ್ತಿದೆನಾದರೆ**
**ನಿಮ್ಮಾಣೆ ನಿಮ್ಮ ಪ್ರಮಥರಾಣೆ**
**ಅದೇನು ಕಾರಣವೆಂದರೆ ನೀವಿಕ್ಕಿದ ಭಿಕ್ಷದಲ್ಲಿಪ್ಪೆನಾಗಿ**
**ಇಂತಲ್ಲದೆ ನಾನು ಅಳಿಮನವ ಮಾಡಿ**
**ಅದೇನು ಕಾರಣವೆಂದರೆ ಪರದ್ರವ್ಯಕ್ಕೆ ಆಸೆ ಮಾಡಿದೆನಾದರೆ**
**ನೀನಾಗಲೇ ಎನ್ನ ನರಕದಲ್ಲಿ ಅದ್ದಿ ನೀನೆದ್ದ ಹೋಗಾ ಶಂಭುಜಕ್ಕೇಶ್ವರಾ**
**ಸಮಗ್ರ ವಚನ ಸಂಪುಟ 5; ವಚನ ಸಂಖ್ಯೆ 1229**

ಈ ವಚನದ ಕಾಲದಲ್ಲೇ ಲಂಚದ ಕಲ್ಪನೆ, ಪದ ಬಳಕೆ ಇರುವಂಥದ್ದು ಅಚ್ಚರಿ ಎನಿಸುತ್ತದೆ. ಹಾಗು ದಾರಿಯಲ್ಲಿ ವಸ್ತುಗಳು ಸಿಕ್ಕಿದರೂ ಮುಟ್ಟುವುದಿಲ್ಲ. ಮುಟ್ಟಿದೆನಾದರೆ ನಿಮ್ಮಾಣೆ ಹಾಗು ಗುರುಹಿರಿಯರಾಣೆ ಹಾಗೆ ಮಾಡಿದರೆ ನಾನು ಮಾತ್ರವಲ್ಲದೆ ನನ್ನೊಂದಿಗೆ ನೀನು ನರಕದಲ್ಲಿ ಬಂದು ಹೋಗಬೇಕಾಗುತ್ತದೆ ಎನ್ನುತ್ತಾಳೆ.

**ಕೂಪ ಚಿಲುಮೆ ಬಹುಜಲಂಗಳಲ್ಲಿ ಸ್ವೀಕರಿಸಿಕೊಂಬುದು ಅದೇತರಶೀಲ**
**ತನು ಕರಗದೆ, ಮನ ಮುಟ್ಟದೆ, ಆಗಿಗೆ ಮುಯ್ಯಾಂತು ಚೇಗಿಗೆ ಹಲಬುತ್ತ,**
**ಸುಖದುಃಖವೆಂಬ ಉಭಯವರಿಗಾಣದೆ,**
**ಅಂದಂದಿಗೆ ಆಯು ಸಂದಿತ್ತೆಂದಿರಬೇಕು,**
**ಆ ಗುಣ ಶಿವಲಿಂಗ ಖಂಡಿತನೇಮ, ಈ ಸಂಗವೆ ಎನಗೆ ಸುಖ**
**ಆಚಾರವೆ ಪ್ರಾಣವಾದ ರಾಮೇಶ್ವರಲಿಂಗದ ಕೂಟ**
**ಸಮಗ್ರ ವಚನ ಸಂಪುಟ: 5, ಪುಟ ಸಂಖ್ಯೆ 471**

ಸುಖ ದುಃಖ ಕಲ್ಪನೆಗಳ ಕಳೆದುಕೊಂಡು, ಆಯುಷ್ಯದ ಹಂಗಿಲ್ಲದೆ, ಕಾಲನ ಪರಿ ಇಲ್ಲದೆ ನಡೆವ ರೀತಿ ಸಾಂಗತ್ಯ ನನಗೆ ಪ್ರಿಯವಾದುದು ಅದೆ ನೇಮ, ಆಚರಣೆ ಅದೆ ನನಗೆ ಸುಖ ಎನ್ನುತ್ತಾಳೆ. ನೀರಿನಿಂದ ಪಡೆದದ್ದೆಲ್ಲವು ಶೀಲ ಶುದ್ಧವಾದುದು ಎಂಬ ಕಲ್ಪನೆಗಳು ಎಷ್ಟು ಸರಿ ಎಂದು ಪ್ರಶ್ನಿಸುತ್ತಾ ದೇಹದ ಭಾವ, ಮನಸ್ಸಿನ ನಾನು ಎಂಬ ಅಹಂಕಾರ ಕರಗದೆ ಸುಖದುಃಖಗಳ ನಡುವೆ ಹಂಬಲಿಸುವ ಸಂಗ ಎನಗೆ

ಬೇಡ ನನಗೆ ಪ್ರಿಯವಾದುದಲ್ಲ ಎನ್ನುತ್ತಾಳೆ.

**ಲವಣದ ಕೊಂಬುದೆಲ್ಲವು ಒಂದೆ ಶೀಲ, ಸರ್ವ ಸಪ್ಪೆ ಎಂಬುದು ಒಂದೆ ಶೀಲ,**
**ಇವೆಲ್ಲವ ವಿಚಾರಿಸಿ, ತಟ್ಟುಮುಟ್ಟಿಗೆ ಬಾರದೆ**
**ತೊಟ್ಟುಬಿಟ್ಟ ಹಣ್ಣಿನಂತೆ ನೆಟ್ಟನೆ ವ್ರತವ ಕೂಡುವುದು ಮೂರನೆಯ ಶೀಲ**
**ಮೂರು ಕೂಡಿ ಒಂದಾಗಿ ನಿಂದುದು, ಆಚಾರವೆ ಪ್ರಾಣವಾದ**
**ಸಮಗ್ರ ವಚನ ಸಂಪುಟ: 5, ಪುಟ ಸಂಖ್ಯೆ 550**

ಉಪ್ಪು, ಸಪ್ಪೆ ರುಚಿ ಗುಣಗಳನ್ನ, ಮುಟ್ಟು ತಟ್ಟುಗಳನ್ನ, ನೇಮ ಆಚರಣೆಗಳನ್ನ ಶೀಲ ಎಂದು ಜಗತ್ತು ಗುರುತಿಸುತ್ತದೆ. ಆದರೆ ಇವೆಲ್ಲವು ತಮ್ಮ ಅಸ್ತಿತ್ವ ಕಳೆದುಕೊಂಡು ಎಲ್ಲವು ತಾನೇ ತಾನಾಗಿ ನಿಲ್ಲುವುದು. ಅಂದರೆ ತೊಟ್ಟು ಬಿಟ್ಟ ಹಣ್ಣಿನಂತೆ ಅಂದರೆ ಮೂಲ ಎಂಬುದನ್ನು ಕಳೆದುಕೊಂಡು ನಿಂತ ಪಕ್ವವಾದ ಹಣ್ಣಿನ ಸ್ಥಿತಿಯಂತೆ ಶೀಲ ಎಂಬುದು ಎನ್ನುತ್ತಾಳೆ. ತುಂಬಿದ ರಸಭರಿತವಾದ ಸ್ಥಿತಿ.

**ತನುಶೀಲವಂತರುಂಟು, ಧನಶೀಲವಂತರುಂಟು,**
**ಧರೆಶೀಲವಂತರುಂಟು, ಕನಕ ವನಿತೆಶೀಲವಂತರುಂಟು,**
**ಕೈ ತೋಟ ಹಿಂದೆಸೆ ಮುಂದೆಸೆ ನಿಲಯಶೀಲವಂತರುಂಟು,**
**ಫಲ ಕುಸುಮ ವಿದಳ ಬಹುಧಾನ್ಯ ಮುಂತಾದ**
**ರಸದ್ರವ್ಯ ಪಶು ಪಾಷಾಣ ವಸ್ತ್ರ ಪರಿಮಳ**
**ಛತ್ರ ಚಾಮರ ಆಂದೋಳ ಕರಿ ತುರಗಂಗಳು**
**ಮುಂತಾದವೆಲ್ಲಕ್ಕೂ ಶೀಲವಂತರುಂಟು,**
**ಅನುಸರಣೆಯ ಕಂಡಲ್ಲಿ, ಆಚಾರ ತಪ್ಪಿದಲ್ಲಿ, ಲಿಂಗಬಾಹ್ಯವಾದಲ್ಲಿ**
**ಆಗವೆ ಲಿಂಗವ ಬಿಟ್ಟು ಲಿಂಗದೊಡಗೂಡುವ ಶೀಲವಂತರಂಗವ ಕಾಣೆ,**
**ಎನ್ನ ಕ್ರಿಯಾ ಭಂಗವಹುದಕ್ಕೆ ಮುನ್ನವೆ ನಿರಂಗವ ಹೇಳಾ,**
**ಆಚಾರವೆ ಪ್ರಾಣವಾದ ರಾಮೇಶ್ವರಲಿಂಗವೆ**
**ಸಮಗ್ರ ವಚನ ಸಂಪುಟ: 5, ಪುಟ ಸಂಖ್ಯೆ 495.**

ಶುದ್ಧತೆ ಎಂಬರ್ಥದಲ್ಲಿ ಗುರುತಿಸಿಕೊಂಡಿದ್ದಾದರೆ ಶೀಲವನ್ನು ಎರಡು ರೀತಿಯಲ್ಲಿ ಗುರುತಿಸುತ್ತಾರೆ. ದೇಹ ಶುದ್ಧತೆ, ವ್ಯವಹಾರ ಶುದ್ಧತೆ. ನಾಗರಿಕ ಸಮಾಜದಲ್ಲಿ ದೇಹ ಶುಚಿತ್ವ ಅಂದರೆ ಲೈಂಗಿಕತೆಯ ಅರ್ಥದಲ್ಲಿ ಹೇಳುತ್ತಾಳೆ. ಹಾಗು ವ್ಯವಹಾರದ ಲೋಕದ ಮಾತುಗಳು ಇಲ್ಲಿ ಬರುತ್ತವೆ. ಲೌಕಿಕದ ವ್ಯವಸಾಯ, ಕೃಷಿ ಪರಿಕಲ್ಪನೆಗಳು, ಅಧಿಕಾರದ ಪರಿಭಾಷೆಯಲ್ಲಿನ ಛತ್ರ ಚಾಮರಗಳು ಎಲ್ಲವು ಆಚರಣೆಗಳ ಮೂಲ ಅವೆಲ್ಲವುಗಳಲ್ಲೂ ಶುದ್ಧತೆ ಅಥವಾ ಶೀಲವಂತರನ್ನು ಕಾಣಬಹುದು. ಆದರೆ ಅಂತರಂಗದ ಶೀಲವಂತರನ್ನು ಕಾಣೆ, ಕಾರ್ಯ ಕಾರಣ ಸಂಬಂಧ ಮೀರಿ ನಡೆವ ಎಲ್ಲಎಲ್ಲವೂ ಲಿಂಗವಾಗಿ ಬದಲಾಗುವವರನ್ನು ಕಾಣೆ ಎನ್ನುತ್ತಾಳೆ.

1. ಭಕ್ತಿಯ ಪಥದ ಹಾದಿಯ ದರ್ಶನಗಳೆಲ್ಲವೂ ಒಂದೇ. ಅದು ಅದ್ವೈತಿಗಳ ನಿಲುವುಗಳಾಗಿರಬಹುದು, ಬುದ್ಧನ ನಿಲುವುಗಳಾಗಿರಬಹುದು, ಶೈವರ, ಅಘೋರಿಗಳ, ಶಾಕ್ತರ ಯಾವುದೇ ಚಲನೆಯ ಮೂಲ ವ್ಯಕ್ತಿ ವಿಶ್ವದಲ್ಲಿ

ಅಡಗುವುದು. ವಿಶ್ವಶಕ್ತಿಯೇ ವ್ಯಕ್ತಿಯ ರೂಪದಲ್ಲಿ ಆವಿರ್ಭವಿಸುವುದು ಆಗಿದೆ. ನಾನು ಎಂಬ ಪ್ರಜ್ಞೆಯೊಂದಿಗೆ ನಡೆವ ಹಾದಿ ವಿಶ್ವ ತಾನು ಬೇರೆ ಎಂದು ನಡೆಸುತ್ತದೆ. ಅಹಂಕಾರದ ಚಲನೆಯೂ ಆಗಿಬಿಡುತ್ತದೆ. ನನಗೆ ತಿಳಿಯದ್ದು ಏನಿದೆ ಎಂಬುದು. ನನ್ನತನ ಕಳೆದುಕೊಂಡು, ವಿಶ್ವದ ಶಕ್ತಿಯನ್ನೇ ನನ್ನೊಳಗು ಮಾಡಿಕೊಂಡು ತಾನೇ ವಿಶ್ವವಾಗಿ ಪ್ರಕೃತಿಯಾಗಿ ಬದಲಾಗಿಬಿಡುವುದು. ಇಲ್ಲಿನ ಭಕ್ತಿಯ ಭಕ್ತನ ರೂಪವಾಗಿದೆ.

2. ದೇವರು ಇಲ್ಲಿ ಮೂರ್ತಿಸ್ವರೂಪನಲ್ಲ, ಅಧಿಕಾರ ವಾಣಿಯೂ ಅಲ್ಲ, ದಂಡಾಧಿಕಾರಿಯು ಅಲ್ಲ. ಗರ್ಭಗುಡಿಯಲ್ಲಿ ಹಾಗು ಉತ್ಸವ ಮೂರ್ತಿಯಾಗಿ ನೆಲೆನಿಂತವನು ಸಾಮಾಜೀಕರಣಕ್ಕೆ ಒಳಗಾದವನು ಅಲ್ಲ. ದೇಹವೇ ದೇವಾಲಯವಾಗಿ, ದೇಹವೇ ದೈವವಾಗಿ ಬದಲಾದವನು. ಅಂಗವೇ ಲಿಂಗವಾಗಿ ಅದುವೇ ಸಂಗವಾಗಿ ಸತಿಪತಿರೂಪವಾದವನು.

3. ಆಚರಣೆ, ನೇಮ, ಶೀಲಗಳು ಬದುಕಿನ ಹಾದಿಗೆ ರೂಢಿಗಳು, ನಿತ್ಯಕರ್ಮಗಳಿದ್ದಂತೆ. ಅವುಗಳ ಚಲನೆ ಮನಸ್ಸಿನ ಬೆಳವಣಿಗೆಯ ಹಾದಿಗೆ ಸಹಾಯಕವಾದವು. ಕೇವಲ ತೋರಿಕೆಯದ್ದಾಗಿ ಉಳಿದು ಬಿಟ್ಟರೆ ಅದರಿಂದ ಬದುಕು, ದೇಹ ಶಿವಶಕ್ತಿಯನ್ನು ಪಡೆಯದು. ಅದರ ಅನುಭವಗಳಿಂದ ವಂಚಿತವಾಗುತ್ತದೆ.

4. ಹುಟ್ಟು ಸಾವು ನೆಪಗಳು. ದೇಹದ ಚಲನೆಯ ಹಾದಿಯಲ್ಲಿರುವಂಥವು. ಆದರೆ ವಚನಕಾರರು/ರ್ತಿಯರು ಜನ್ಮಾಂತರಗಳನ್ನು ನಂಬುವುದಿಲ್ಲ. ಸ್ವರ್ಗ ನರಕಗಳನ್ನು ನಂಬುವುದಿಲ್ಲ. ದೈವ ಎಂಬುದು ದೇವಾಲಯದೊಳಗಿರುವಂಥದ್ದು ಎಂಬ ಕಲ್ಪನೆಯನ್ನು ಒಪ್ಪುವುದಿಲ್ಲ. ದೈವ ಆಚರಣೆಯ, 237 ಆರಾಧನೆಯ ಭಾಗವು ಅಲ್ಲ. ಸಾಧನೆಯ ಪಥದಲ್ಲಿ ಅರಳುವ ಹಾದಿ ದೇಹವೇ ದೇವರಾಗುವ, ದೈವವಾಗುವ, ಬೆಳಕಾಗುವ, ಬಯಲಾಗುವ, ಪ್ರಕೃತಿಯಾಗುವ ಹಾದಿ.

5. ಪರಂಪರೆಯ ಕಲ್ಪನೆಗಳನ್ನು ಪ್ರಶ್ನಿಸುತ್ತ ನಡೆಯುವುದು, ಉತ್ತರಿಸುವುದು, ಹೀಗೆ ಎಂದು ಏನೆಂದು ತೋರಿಸದೆ ನುಡಿಯಲ್ಲಿ ಹೇಳಿದ್ದು ಅರ್ಧ ಸತ್ಯಗಳಷ್ಟೇ ಎನ್ನುತ್ತ ಮಾತಿನ ಹಂಗಿಲ್ಲ ಎನ್ನುತ್ತಲೇ, ಭಾಷೆಯಲ್ಲಿಯೇ ಅನುಭವಗಳ ಮೀರಿದ ಸ್ವಂತಿಕೆಯ ಅನುಭೂತಿಗಳನ್ನು ಸ್ಪರ್ಶಿಸುವಂತೆ ಮಾಡುವ ಶಕ್ತಿಯನ್ನು ವಚನಗಳಲ್ಲಿ ಅಭಿವ್ಯಕ್ತಿಸಿರುವುದು ಕಾಣುತ್ತೇವೆ.

## ಪರಾಮರ್ಶನ ಗ್ರಂಥಗಳು:

1. ಕಲಬುರ್ಗಿ ಎಂ.ಎಂ. (ಪ್ರಧಾನ ಸಂ), (1993), ಸಮಗ್ರ ವಚನ ಸಂಪುಟ, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರ.
2. ಕಲಬುರ್ಗಿ ಎಂ.ಎಂ. (ಪ್ರಧಾನ ಸಂ), (1993), ಸಮಗ್ರ ವಚನ ಸಂಪುಟ 1 (ಬಸವಣ್ಣನವರ ವಚನಗಳು), ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರ.
3. ಕಲಬುರ್ಗಿ ಎಂ.ಎಂ. (ಪ್ರಧಾನ ಸಂ), (1993), ಸಮಗ್ರ ವಚನ ಸಂಪುಟ 2 (ಅಲ್ಲಮಪ್ರಭುದೇವರ ವಚನಗಳು), ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರ.
4. ಕಲಬುರ್ಗಿ ಎಂ.ಎಂ. (ಪ್ರಧಾನ ಸಂ), (1993), ಸಮಗ್ರ ವಚನ ಸಂಪುಟ 5 (ಶಿವಶರಣೆಯರ ವಚನಗಳು), ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.